# ಸಂಪಾದಕೀಯ

## ಮಾನವನ ನೈತಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ – ಭಾಗ ೨

ಮಾನವನ ನೈತಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಅವನು ಬೆಳೆದು ಬಂದ ವಾತಾವರಣ, ಪಡೆದುಕೊಂಡ ಶಿಕ್ಷಣ ಹಾಗೂ ಹಿರಿಯರ ಮಾದರಿ—ಇವುಗಳೆಲ್ಲ ಗಮನಾರ್ಹ ಪಾತ್ರ ವಹಿಸುತ್ತವೆಯಾದರೂ ಎಲ್ಲ ಬೆಳವಣಿಗೆಗಳ ಮೂಲವಾಗಿರುವ ಅವನ ಅಂತರಂಗದ ಚೈತನ್ಯದ ಅಭಿವ್ಯಕ್ತಿಯೇ ಪ್ರಧಾನ ಕಾರಣವೆನ್ನಬಹುದು. ಎಲ್ಲ ಕಲಿಕೆಯೂ ನಮ್ಮೊಳಗಿನಿಂದ ಹೊರ ಹೊಮ್ಮುತ್ತದೆ. ವಿದ್ಯೆ ಅಥವಾ ಜ್ಞಾನ ವಸ್ತುಗಳಲ್ಲಾಗಲಿ, ಪುಸ್ತಕಗಳಲ್ಲಾಗಲಿ ಅಥವಾ ಬಳಸುವ ಪದಗಳಲ್ಲಾಗಲಿ ಅಡಗಿಲ್ಲ. ಮಾಹಿತಿಯನ್ನು ಗ್ರಹಿಸಿ ಅದಕ್ಕೆ ಅರ್ಥವನ್ನು ಕಲ್ಪಿಸುವವನು ಮಾನವನಾದ್ದರಿಂದ ಅವನಲ್ಲೇ ಜ್ಞಾನದ ಸ್ಫುರಣೆಯಾಗುವುದು. ಹೊರಗಿನ ಪ್ರಕ್ರಿಯೆಗಳೆಲ್ಲ ಈ ಅನ್ವೇಷಣೆಯಲ್ಲಿ ಸಹಾಯಕ ಅಂಶಗಳು. ವ್ಯಕ್ತಿಗಳು ಹಾಗೂ ಸನ್ನಿವೇಶಗಳು ಅಂತರ್ನಿಹಿತವಾದ ಜ್ಞಾನವನ್ನು ಅನಾವರಣ ಗೊಳಿಸುವಲ್ಲಿ ಸಹಾಯ ಮಾಡಬಹುದು. "ಪ್ರತಿಯೊಬ್ಬ ನಲ್ಲಿಯೂ, ಒಂದು ಮಗುವಿನಲ್ಲಿ ಕೂಡ, ಆಗಲೆ ಜ್ಞಾನವಿದೆ ಎನ್ನುತ್ತದೆ ವೇದಾಂತ. ಅದು ಕೇವಲ ಜಾಗೃತವಾಗ ಬೇಕಾಗಿದೆ, ಅಷ್ಟೆ. ಇಷ್ಟು ಮಾತ್ರ ಗುರುವಿನ ಕೆಲಸ. ಅವನು ವಿದ್ಯಾರ್ಥಿಗಳಿಗೂ ಇಷ್ಟನ್ನೇ ಮಾಡಬೇಕು. ಪ್ರಪಂಚಕ್ಕೆ ಬಂದ ಜ್ಞಾನವೆಲ್ಲ ಮಾನವನ ಮನಸ್ಸಿನಿಂದ ಬಂದಿದೆ. ವಿಶ್ವದ ಅನಂತ ಪುಸ್ತಕಭಂಡಾರ ನಿಮ್ಮ ಮನಸ್ಸಿನಲ್ಲಿದೆ. ಬಾಹ್ಯ ಪ್ರಪಂಚ ಒಂದು ಸೂಚನೆಯನ್ನು ಮಾತ್ರ ಕೊಡುವುದು, ಅದೊಂದು ನಿಮಿತ್ತ ಮಾತ್ರ", ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪುಟ. ೪೩, ೪೫). ತಿಳಿವಳಿಕೆ, ಮಾನಸಿಕ ಬೆಳವಣಿಗೆಯನ್ನು ಅವಲಂಬಿಸಿರುವ ಮಾನವನ ನೈತಿಕಪ್ರಜ್ಞೆ, ಇವೂ ಅವನ ಚೈತನ್ಯದ ಅಭಿವ್ಯಕ್ತಿಗೆ ಸಮನಾಗಿರುತ್ತವೆ.

### ವಿಕಾಸವು ಚೈತನ್ಯದಿಂದ

ಜಡವಸ್ತುಗಳಿಗೂ ಪ್ರಾಣಿವರ್ಗಕ್ಕೂ ಇರುವ ವ್ಯತ್ಯಾಸ ಚೈತನ್ಯದಲ್ಲಿ ಅಡಗಿದೆ. ಜೀವಿಯ ವಿಕಾಸದ ಹಂತ ಎಲ್ಲ ಜೀವಕ್ರಿಯೆಗಳಿಗೆ ಕಾರಣವಾದ, ಜೀವಿಗಳಲ್ಲಿರುವ, ಆತ್ಮದ ಅಭಿವ್ಯಕ್ತಿಯನ್ನಾಧರಿಸಿದೆ. ಪ್ರಾಣಿಗಳಂತೆ ಮನುಷ್ಯನಿಗೂ ಶರೀರ ಪಿದೆಯಾದರೂ ಅವನಲ್ಲಿರುವ ಅಹಂಪ್ರಜ್ಞೆ, ವಿವೇಚನಾ ಸಾಮರ್ಥ್ಯಗಳು ಅವನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸುತ್ತವೆ. ಅಜ್ಞಾನದ ಅನಾವರಣವೇ ವಿಕಾಸದ ಕುರುಹು ಎಂಬುದು ವೇದಾಂತದ ನಿಲುವು. ಅಜ್ಞಾನವು ಸಂಪೂರ್ಣವಾಗಿ ನಾಶವಾದಾಗ ಮಾನವನು ತನ್ನ ಕ್ಷುದ್ರತೆಯನ್ನು ಕಳೆದುಕೊಳ್ಳುತ್ತಾನೆ, ವಿಶ್ವಮಾನವನಾಗುತ್ತಾನೆ, ದೇವರ ಮಟ್ಟಕ್ಕೆ ಏರುತ್ತಾನೆ. ಇದು ವಿಕಾಸದ ಗುರಿ. ಸಂಯಮ, ತ್ಯಾಗ ಹಾಗೂ ಸೌಹಾರ್ದ, ಪ್ರೀತಿಗಳಂತಹ ಗುಣಗಳು ಸುಸಂಸ್ಕೃತ ಮಾನವನ ಲಕ್ಷಣಗಳು, ವಿಕಾಸದ ಹೆಗ್ಗುರುತುಗಳು. ಮಾನವಶಾಸ್ತ್ರವು ಪ್ರಾಣಿಗಳಿಗೆ ಹೊಂದಿಸುವ ಅಳತೆಗೋಲುಗಳನ್ನಾಗಲಿ, ಸಂಶೋಧನೆಗಳನ್ನಾಗಲಿ ಮಾನವನಿಗೆ ಅನ್ವಯಿಸಬಾರದು. ಮನುಷ್ಯನ ವರ್ತನೆಯನ್ನು ತೀರ್ಮಾನಿಸುವುದು ಅವನ ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಪ್ರಾಣಿಜಗತ್ತಿನಲ್ಲಿ ನಾವು ನಿಜವಾಗಿಯೂ ಜೀವನಸ್ಪರ್ಧೆ ಮತ್ತು ಬಲಿಷ್ಠವಾದುದೇ ಉಳಿಯುವುದು ಮುಂತಾದ ನಿಯಮಗಳು ಇರುವುದನ್ನು ಸ್ಪಷ್ಟವಾಗಿ ನೋಡಬಹುದು. ಆದರೆ ಬುದ್ಧಿಯ ವಿಕಾಸವುಳ್ಳ ಮನುಷ್ಯ-ಜಗತ್ತಿನಲ್ಲಿ ಈ ನಿಯಮದ ವಿರೋಧವೇ ಕಂಡುಬರುತ್ತದೆ. ಯಾರನ್ನು ನಾವು ನಿಜವಾಗಿಯೂ ಮಹಾತ್ಮರು ಅಥವಾ ಆದರ್ಶ ಪುರುಷರು ಎಂದುಕೊಳ್ಳುತ್ತೇವೆಯೋ ಅವರಲ್ಲಿ ಯಾವುದೇ ಬಾಹ್ಯ ಹೋರಾಟ ಇರುವುದಿಲ್ಲ. ಮನಸ್ಸನ್ನು ಯಾರು ಎಷ್ಟೆಷ್ಟು ಸಂಯಮ ಮಾಡಿಕೊಂಡಿರುವರೋ ಅವರು ಅಷ್ಟಷ್ಟು ದೊಡ್ಡವರಾಗಿದ್ದಾರೆ. ಮನಸ್ಸಿನ ವೃತ್ತಿಗಳೆಲ್ಲವೂ ಪೂರ್ತಿಯಾಗಿ ವಿಶ್ರಾಂತಿಯಲ್ಲಿದ್ದರೆ ಆತ್ಮದ ವಿಕಾಸವುಂಟಾಗುವುದು" (ಕೃತಿಶ್ರೇಣಿ ೮: ಪು. ೧೩೫).

> **ದೇಶಕಾಲಗಳನ್ನೂ ಮೀರಿಹೋಗುವ ಶಕ್ತಿ ಮನಸ್ಸಿಗಿದೆ ಎಂದರೆ ಅದು ಸಾಮಾನ್ಯ ಭೌತಿಕ ನಿಯಮಗಳ ಅಧೀನದಲ್ಲಿ ಇಲ್ಲವೆಂದಾಯಿತು. ಮನಸ್ಸನ್ನು ಆಗ ಭೌತಿಕ ವಸ್ತು ಎನ್ನುವುದಕ್ಕಿಂತಲೂ ಅಭೌತಿಕ ಅಥವಾ ಆತ್ಮಸಂಬಂಧಿಯಾದ ತತ್ತ್ವ ಎನ್ನಬೇಕಾಗುವುದು. –ಜೆ. ಬಿ. ರೈನ್**

### ನಿಯಮವೂ ವಿಕಾಸಕ್ಕೆ ಪೋಷಕ

ವಿಕಾಸ ಹೊಂದಿದ ಮಾನವನೇ ನಾಗರಿಕತೆಯ ಕುರುಹು. ನಾಗರಿಕತೆಯನ್ನು ಆಯಾ ಸಮಾಜದ ವ್ಯಕ್ತಿಗಳ ನಡವಳಿಕೆ, ನಂಬಿಕೆಗಳ ಆಧಾರದ ಮೇಲೆ ಗುರುತಿಸುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮಾಜದಲ್ಲಿರುವ ನೀತಿ, ನಿಯಮಗಳನ್ನು ಗೌರವಿಸುತ್ತ ಶಿಕ್ಷಣದೊಂದಿಗೆ ಕಲೆ, ನಿಪುಣತೆಗಳನ್ನು ರೂಢಿಸಿಕೊಂಡಾಗ ಆ ಸಮಾಜವನ್ನು ಉತ್ತಮ ಸಮಾಜ,

ಅಭಿವೃದ್ಧಿ ಹೊಂದಿದ ಸಮಾಜ, ಆದರ್ಶ ಸಮಾಜ ಎಂದು ಕರೆಯುತ್ತೇವೆ. ಸಮಾಜದಲ್ಲಿರುವ ಮಾನವನು ಎಷ್ಟು ಸುಖಿಯಾಗಿದ್ದಾನೆ ಎನ್ನುವುದೂ ಮುಖ್ಯ. ಎಲ್ಲ ಸೌಲಭ್ಯಗಳಿದ್ದರೂ, ಆರ್ಥಿಕ ವ್ಯವಸ್ಥೆಯು ಸರಿಯಿದ್ದರೂ ಭಯ, ಒತ್ತಡಗಳಿದ್ದರೆ ಮಾನವನು ಸುಖಿಯಾಗಿರಲಾರ. ಹೆಜ್ಜೆಹೆಜ್ಜೆಗೂ ನಿಯಮಗಳಿದ್ದರೆ ಜೀವಿಸುವುದು ಕಷ್ಟವಾಗುತ್ತದೆ. ದುರ್ಬಲರನ್ನು ರಕ್ಷಿಸುವುದಕ್ಕಾಗಿ ಹಾಗೂ ಎಲ್ಲರಿಗೂ ಸಮಾನವಾಗಿ ಜೀವಿಸುವ ಹಕ್ಕುಗಳನ್ನು ಕಲ್ಪಿಸಲು ನೀತಿ, ನಿಯಮಗಳು ಇರುವುವು. ಮಾನವನನ್ನು ನಿಯಂತ್ರಿಸಲು ಮಾನವನೇ ನಿರ್ಮಿಸುವ ಈ ವಿಧಿ. ನಿಷೇಧಗಳು ಶಿಸ್ತು, ಸಹಬಾಳ್ವೆಯನ್ನು ಎಲ್ಲರಿಗೂ ಅನ್ವಯಿಸಿ ಜೀವನದ ಗುಣಮಟ್ಟವನ್ನು ಏರಿಸುತ್ತ ಹೋಗುತ್ತವೆ. ಕಾಲಕ್ಕೆ ತಕ್ಕಂತೆ ಈ ನಿಯಮಗಳೂ ಬದಲಾಗುತ್ತ ಸಾಮಾಜಿಕ ರಚನೆ ಹಾಗೂ ಬೆಳವಣಿಗೆಗೆ ಕಾರಣವಾಗುತ್ತವೆ. ಒಬ್ಬ ವ್ಯಕ್ತಿಯು ತನ್ನಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಬಳಸಿಕೊಂಡು ತನ್ನ ಗುರಿ ಬಯಕೆಗಳನ್ನು ಸಾಧಿಸುತ್ತಾನೆ. ಇದೂ ಕೂಡ ವ್ಯಕ್ತಿಕೇಂದ್ರಿತವಾದ ನಿಯಮವೇ. ಅಂತೆಯೇ ಸಮಾಜದ ರಚನೆಯಲ್ಲಿ ನಿಯಮಗಳು ಸಾಮೂಹಿಕ ಹಿತವನ್ನು ಉದ್ದೇಶವಾಗಿ ಹೊಂದಿರುತ್ತವೆ. ನಿಯಮಗಳು ಕಡಮೆಯಿರುವ ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚು ಶೀಲಸಂಪನ್ನರು ಎಂದು ನಿರ್ಧರಿಸಲಾಗದು. ಮುಕ್ತ ಸಮಾಜವೇ (Free Society) ಯುಕ್ತ ಎನ್ನುವುದು ಕೆಲವರ ಮತ. ವಿದೇಶಗಳಲ್ಲಿ ಆದಿಮಾನವರಂತೆ ಮುಕ್ತವಾಗಿ ನಡೆದುಕೊಳ್ಳುವ ಸಮಾಜ ಸಂಸ್ಥೆಗಳಿವೆ. ಇದು ಸಂಸ್ಕೃತಿಯೇ ಎಂಬ ಪ್ರಶ್ನೆ ಏಳುತ್ತದೆ. ಅಂತಹ ಸಂಸ್ಥೆಗಳಲ್ಲೂ ಸಮಾಜಗಳಲ್ಲೂ ತನ್ನದೇ ಆದ ನಿಯಮಗಳಿರುತ್ತವೆ. ನಿಯಮಗಳಿಲ್ಲದ ಸಮಾಜ ರಚನೆ ಅಸಾಧ್ಯವೆಂದೇ ಹೇಳಬಹುದು. ಪ್ರಾಣಿಜಗತ್ತಿನಲ್ಲೂ ನಿಯಮಗಳಿವೆ. ಬುದ್ಧಿಯನ್ನು ಹೊಂದಿರುವ ಮಾನವ ನಿಯಮಗಳ ಮೂಲಕ ತನ್ನನ್ನು ಹಾಗೂ ಇತರರನ್ನು ಸಂಯಮದ ಜೀವನವನ್ನು ನಡೆಸುವಂತೆ ಮಾಡಿಕೊಳ್ಳುತ್ತಾನೆ, ಆ ಮೂಲಕ ಸಾಮೂಹಿಕ ಹಿತವನ್ನು ಸಾಧಿಸಲು ಪ್ರಯತ್ನಿಸುತ್ತಾನೆ.

### ನೈತಿಕ ಸಿದ್ಧಾಂತಗಳು

ಮಾನವನು ಹೇಗೆ ನಡೆದುಕೊಳ್ಳುತ್ತಾನೆ ಹಾಗೂ ಹೇಗೆ ನಡೆದುಕೊಳ್ಳಬೇಕು ಎಂಬ ಎರಡು ಪ್ರಮುಖ ಅಧ್ಯಯನಗಳಿಂದ ಶಿಸ್ತು, ನೀತಿ, ನಿಯಮಗಳ ಆವಶ್ಯಕತೆ ಬಂದಿದೆ. ಮಾನವನ ನಡವಳಿಕೆಯನ್ನು ವಿವರಿಸುವ ಅನೇಕ ಸಿದ್ಧಾಂತಗಳಿವೆ. ಇವುಗಳ ಮೂಲಕ ಮಾನವನ ನೈತಿಕ ಪ್ರಜ್ಞೆಯ ಹಿಂದಿರುವ ಅಂಶಗಳನ್ನು ಅಧ್ಯಯನ ಮಾಡಲಾಗುತ್ತದೆ. ಹೇಗೆ ನಡೆದುಕೊಂಡರೆ ಮಾನವನು ಉತ್ತಮನಾಗಬಲ್ಲ ಎಂಬುದು ಅಥವಾ ನೈತಿಕ ನಡವಳಿಕೆಯ ನೀತಿ ತತ್ತ್ವಗಳನ್ನು ತಿಳಿಸುವ ಸಿದ್ಧಾಂತಗಳು ಪ್ರಮಾಣಕ ನೀತಿಶಾಸ್ತ್ರದ (Normative Ethics) ವಸ್ತು. ಮಾನವನು ನಿರಂತರವಾಗಿ ತನ್ನ ಹಾಗೂ ಇತರರ ನಡವಳಿಕೆಯನ್ನು ಪರಿಶೀಲಿಸುವುದರಿಂದ ಈ ಶಾಸ್ತ್ರ ಬಹಳ ಹಿಂದಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಜಾರಿಯಲ್ಲಿದೆ. ಧರ್ಮ ಗ್ರಂಥಗಳು, ಪುರಾಣಗಳು, ಜನಪದ ಕಥೆಗಳು, ಶಿಲಾಶಾಸನಗಳು ಹಾಗೂ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಗಳ ನಡೆನುಡಿಗಳು ಈ ನೀತಿಶಾಸ್ತ್ರದ ವಿವಿಧ ಅಂಶಗಳನ್ನು ಪ್ರತಿಬಿಂಬಿಸುತ್ತ ನೈತಿಕ ಪರಂಪರೆಯನ್ನು ಸೃಷ್ಟಿಸಿರುತ್ತವೆ. ಇದರ ಜೊತೆಗೆ ಅನೇಕ ಚಿಂತನಶೀಲ ವ್ಯಕ್ತಿಗಳು ತಮ್ಮ ಅಧ್ಯಯನಗಳ ಮೂಲಕ ಮೀಮಾಂಸೆಗಳನ್ನು ಕಂಡುಹಿಡಿದು ನೈತಿಕತೆಯ ಮೂಲವನ್ನು ವಿವರಿಸಲು ಪ್ರಯತ್ನಿಸಿದ್ದಾರೆ.

### ಸಾರ್ವತ್ರಿಕವಾಗಿ ಉತ್ತಮವಾದುದು ಒಳ್ಳೆಯದು

ಸನ್ನಿವೇಶ ಅಥವಾ ವ್ಯಕ್ತಿಗತವಾದ ಭಾವನೆಗಳಿಗೆ ಅತೀತವಾದ ನೈತಿಕ ನಿಯಮಗಳಿವೆ, ಹಾಗೂ ಈ ನಿಯಮಗಳನ್ನು ಎಲ್ಲ ಸಮಾಜಗಳಲ್ಲೂ ನಾವು ಗುರುತಿಸಬಹುದು ಎಂದು ಪ್ರತಿಪಾದಿಸಿದವನು ಇಮ್ಯಾನುಯಲ್ ಕ್ಯಾಂಟ್ (೧೭೨೪-೧೮೦೪). ಕರ್ತವ್ಯಪ್ರಜ್ಞೆ ಹಾಗೂ ಜಾಗೃತ ಇಚ್ಛಾಶಕ್ತಿ, ವಿಚಾರಶಕ್ತಿಗಳೇ ನೈತಿಕಪ್ರಜ್ಞೆಗೆ ಕಾರಣ ಎಂದು ಇವನ ವಾದ. ಜಗತ್ತನ್ನೇ ನಿಯಂತ್ರಿಸುವ ಒಂದು ಪ್ರಕೃತಿಯ ನಿಯಮವಿದೆ ಹಾಗೂ ಮಾನವನ ಬುದ್ಧಿ ಅದರೊಂದಿಗೆ ಹೊಂದಿಕೊಂಡಾಗ ಅವನ ನಡವಳಿಕೆ ಸರಿಯಾಗಿರುತ್ತದೆ ಎಂದು ತಿಳಿಸುವ ಈ ಸಿದ್ಧಾಂತ ಇಚ್ಛಾಪೂರ್ವಕವಾಗಿ ಮನುಷ್ಯ ನೈತಿಕತೆಯನ್ನು ಸಾಧಿಸಬೇಕು ಎಂದು ಪ್ರತಿಪಾದಿಸುತ್ತದೆ. ತನ್ನ ನಡವಳಿಕೆಯು ಸಾರ್ವತ್ರಿಕವಾಗಿ ಒಳ್ಳೆಯದೇ ಎಂದು ಮನುಷ್ಯ ಚಿಂತಿಸಬೇಕು ಎನ್ನುತ್ತ ಕ್ಯಾಂಟ್ ಒಂದು ಉದಾಹರಣೆಯನ್ನು ನೀಡುತ್ತಾನೆ. ಅನೇಕ ಸಂಕಷ್ಟಗಳಿಂದ ಪೀಡಿತನಾದ ಒಬ್ಬ ವ್ಯಕ್ತಿ ಆತ್ಮಹತ್ಯೆಯನ್ನು ಬಯಸಬಹುದು. ಇದು ಎಲ್ಲರಿಗೂ ಅನ್ವಯಿಸುವುದೇ ಎಂದು ಚಿಂತಿಸಿದಾಗ ಇದು ಸರಿಯಾದ ನಡವಳಿಕೆಯಲ್ಲ ಎಂಬ ಅರಿವು ಅವನಿಗೆ ಬರುತ್ತದೆ. ಎಲ್ಲರಿಗೂ ಅನ್ವಯಿಸುವ ನಿಯಮಗಳೇ ಉತ್ತಮ ನಡತೆಗೆ ಆಧಾರ ಎಂಬುದು ಈ ಸಿದ್ಧಾಂತದ ಸಾರಾಂಶ. ಅವನ ಮತ್ತೊಂದು ಸಿದ್ಧಾಂತವೆಂದರೆ, ತನ್ನನ್ನೇ ಆಗಲಿ ಅಥವಾ ಬೇರೊಬ್ಬ ಮಾನವನನ್ನೇ ಆಗಲಿ ಯಾವುದೇ ಉದ್ದೇಶ ಸಾಧನೆಯ ವಸ್ತುವಾಗಿಸಿ ಕೊಳ್ಳಬಾರದು. ದಾಸ್ಯ, ವೇಶ್ಯಾವೃತ್ತಿ ಅಥವಾ ವಾಣಿಜ್ಯಕ್ಕಾಗಿ ಮನುಷ್ಯನನ್ನು ವಸ್ತುವಿನಂತೆ ಬಳಸುವುದು ಅವನ ವ್ಯಕ್ತಿತ್ವಕ್ಕೆ ಅಗೌರವವನ್ನು ಸೂಚಿಸಿದಂತೆ. ಹೊರಗಿನ ನಿಯಮಗಳಿಗಿಂತ

ಮಾನವನು ತನ್ನಲ್ಲೇ ಇರುವ ವೈಚಾರಿಕತೆ ಹಾಗೂ ಕರ್ತವ್ಯ ಪ್ರಜ್ಞೆಗಳನ್ನು ಅನುಸರಿಸುತ್ತಾನೆ, ಉತ್ತಮ ಗುಣಗಳ ಕರೆಗೆ ಓಗೊಡುತ್ತಾನೆ ಎಂಬುದು ಮೂರನೆಯ ಸಿದ್ಧಾಂತ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬುದು ಸಾರ್ವತ್ರಿಕವಲ್ಲ, ವೈಯಕ್ತಿಕವೆಂದು ಹೇಳುತ್ತ ಸ್ವಾಮಿ ವಿವೇಕಾನಂದರು ನುಡಿಯುತ್ತಾರೆ: "ಒಳ್ಳೆಯದು ಕೆಟ್ಟದ್ದು ಎಂಬುದು ಒಂದು ಭ್ರಾಂತಿ; ಅವು ಹೊರಗಡೆ ಇಲ್ಲ. ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ವ್ಯತ್ಯಾಸ ಹೆಚ್ಚು ಕಡಮೆಯಲ್ಲಿದೆ. ಆತ್ಮದ ಆವಿರ್ಭಾವ ಮಂದವಾಗಿದ್ದಾಗ ಅದನ್ನು ಪಾಪ ಎನ್ನುವೆವು, ಅದು ತೀವ್ರವಾಗಿದ್ದಾಗ ಅದನ್ನೇ ಪುಣ್ಯ ಎನ್ನುವೆವು" (ಬೋಧನೆಯ ಸಾರ, ಪು.೫೦).

## ಸುಖಾನುಭವವೆಲ್ಲ ಒಳ್ಳೆಯದು

ಮನುಷ್ಯ ಸುಖವನ್ನೇ ಬಯಸುತ್ತಾನೆ, ದುಃಖವನ್ನು ತಿರಸ್ಕರಿಸುತ್ತಾನೆ ಎಂಬ ಸಿದ್ಧಾಂತವನ್ನು ವಿಸ್ತರಿಸಿ ಯಾವ ಕ್ರಿಯೆಗಳು ಅನೇಕ ಜನರಿಗೆ ಸುಖಾನುಭವವನ್ನು ನೀಡುವುವೋ ಅವು ಒಳ್ಳೆಯವು ಎಂದು ಪ್ರತಿಪಾದಿಸಿದವನು ಜಾನ್ ಸ್ಟುಅರ್ಟ್ ಮಿಲ್ (೧೮೦೬-೧೮೭೩). ಮನುಷ್ಯ ಕೇವಲ ದೈಹಿಕ ಸುಖವನ್ನು ಮಾತ್ರ ಬಯಸುವುದಿಲ್ಲ; ಮಾನಸಿಕ ಹಾಗೂ ಬೌದ್ಧಿಕ ಸುಖವನ್ನೂ ಬಯಸುತ್ತಾನೆ. ಈ ಸುಖದ ಬಯಕೆಯು ಸ್ವಾರ್ಥ ಹಾಗೂ ಪೈಪೋಟಿಗಳಿಗೆ ಕಾರಣವಾಗುತ್ತದೆ ಎಂಬ ಆಕ್ಷೇಪಣೆಗೆ ಉತ್ತರವಾಗಿ ಕೆಲವರ ಸುಖಕ್ಕಾಗಿ ಮತ್ತೆ ಕೆಲವರು ತ್ಯಾಗ ಮಾಡಬೇಕಾಗುತ್ತದೆ ಎಂದು ಮಿಲ್ ಹೇಳುತ್ತಾನೆ. ವೈಯಕ್ತಿಕ ಸುಖಕ್ಕಿಂತ ಸಮಾಜದ ಸುಖಕ್ಕಾಗಿಯೇ ಎಲ್ಲರೂ ಪ್ರಯತ್ನಿಸಬೇಕು ಎಂಬುದು ಅವನ ಮತ. ಮಾಡುವ ಕೆಲಸಗಳೆಲ್ಲ ಸುಖದ ಪರಿಣಾಮವನ್ನು ಹೊಂದಿದ್ದರೆ, ಸಮಾಜಕ್ಕೆ ಉಪಯುಕ್ತವಾಗಿದ್ದರೆ ಸಾಕು ಎಂದು ಮಿಲ್ ಹೇಳುತ್ತಾನೆ. ಕ್ರಿಯೆಯ ಹಿಂದಿನ ಉದ್ದೇಶ ಮುಖ್ಯವಲ್ಲ, ಕ್ರಿಯೆಯ ಪರಿಣಾಮ ಸುಖಕರವೇ ಎಂಬುದೇ ಮುಖ್ಯ ಎನ್ನುವ ಇವನ ವಾದವನ್ನು ನಿರಾಕರಿಸುತ್ತ ಸ್ವಾಮಿ ವಿವೇಕಾನಂದರು ಹೇಳುವುದು ಹೀಗೆ: "ನನ್ನ ಜೀವನದಲ್ಲಿ ಕಲಿತ ಅತ್ಯುತ್ತಮ ಪಾಠವೆಂದರೆ, ಗುರಿಗೆ ಕೊಡುವ ಪ್ರಾಮುಖ್ಯತೆಯನ್ನೇ ದಾರಿಗೂ ಕೊಡಬೇಕೆನ್ನುವುದು. ನಾನು ಯಾರಿಂದ ಇದನ್ನು ಕಲಿತೆನೋ ಆತನೊಬ್ಬ ಮಹಾನುಭಾವ. ಅವರ ಇಡೀ ಜೀವನವೇ ಈ ಸಿದ್ಧಾಂತಕ್ಕೆ ಒಂದು ನಿದರ್ಶನವಾಗಿತ್ತು. ಈ ಒಂದು ಮಹಾಸಿದ್ಧಾಂತದಿಂದ ನಾನು ಹಲವು ಒಳ್ಳೆಯ ನೀತಿಗಳನ್ನು ಅಂದಿನಿಂದಲೂ ಕಲಿಯುತ್ತಿರುವೆನು. ಗುರಿಗೆ ಕೊಡುವಷ್ಟು ಗಮನವನ್ನೇ ದಾರಿಗೂ ನೀಡುವುದರಲ್ಲಿ ಯಶಸ್ಸಿನ ಎಲ್ಲ ರಹಸ್ಯವೂ ಇರುವಂತೆ ನನಗೆ ತೋರುವುದು" (ಕೃತಿಶ್ರೇಣಿ, ೬, ಪು.೨೪೨).

## ಪ್ರಕೃತಿಯ ಗುಲಾಮನಲ್ಲ ಮಾನವ

ಪ್ರಕೃತಿಯ ನಿಯಮಗಳನ್ನು ವಿರೋಧಿಸದೆ ಬದುಕುವುದೇ ನೈತಿಕತೆ ಎಂದು ಪ್ರತಿಪಾದಿಸಿದವನು ಹರ್ಬರ್ಟ್ ಸ್ಪೆನ್ಸರ್ (೧೮೨೦-೧೯೦೩). ಎಲ್ಲರೂ ಪ್ರಕೃತಿಯ ನಿಯಮಗಳಿಗೆ ಸರಿ ಹೊಂದುವಂತೆ ನಡೆದುಕೊಂಡಾಗ ಕೇವಲ ವಿದೇಶೀಯರ ದಾಳಿ ಹಾಗೂ ಅಪರಾಧಗಳನ್ನು ತಡೆಗಟ್ಟುವಷ್ಟಕ್ಕೆ ಮಾತ್ರ ರಾಜ್ಯದ ಆಡಳಿತವು ಸೀಮಿತವಾಗುವುದು ಎಂಬುದು ಇವನ ಸಿದ್ಧಾಂತ. ಸ್ವಾಮಿ ವಿವೇಕಾನಂದರು ಹಾಗೂ ಅನಂತರದ ಚಿಂತಕರು ಈ ತತ್ತ್ವವನ್ನು ತಿರಸ್ಕರಿಸಿದ್ದಾರೆ. ಜೀವನವು ಪ್ರಕೃತಿಯ ವಿರುದ್ಧ ಹೋರಾಟವೇ ಆಗಿದೆ. ಪ್ರಕೃತಿ ಬಯಸಿದಂತೆ ಮಾನವ ಜೀವಿಸಲಾರ. ಅದನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು, ಬಳಸಿಕೊಳ್ಳುತ್ತ ಅದರ ನಿಯಮಗಳನ್ನು ಉಲ್ಲಂಘಿಸಿ ಉತ್ತಮಿಕೆಯನ್ನು ಸಾಧಿಸಲು ಮನುಷ್ಯ ಬಯಸುತ್ತಾನೆ.

## ನೈತಿಕತೆ ಪರಿಪೂರ್ಣ ವ್ಯಕ್ತಿತ್ವಕ್ಕೆ ನಾಂದಿ

ಮಾನವನ ಪರಿಪೂರ್ಣ ವ್ಯಕ್ತಿತ್ವಕ್ಕೆ ಉಪಯುಕ್ತವಾದ ವಿಚಾರಗಳೇ, ಪದ್ಧತಿಗಳೇ ಒಳ್ಳೆಯವು; ಉಳಿದವು ಕೆಟ್ಟವು ಎಂದು ಪ್ಲೇಟೋ ಪ್ರತಿಪಾದಿಸಿದ್ದ. ಇದನ್ನು ಅನೇಕರು ಸಮರ್ಥಿಸಿದ್ದಾರೆ. ವಸ್ತುಗಳನ್ನು ಹಾಗೂ ಕ್ರಿಯೆಗಳನ್ನು ವಿಶ್ಲೇಷಿಸುವ ಬುದ್ಧಿಶಕ್ತಿ, ಪ್ರೀತಿ, ತ್ಯಾಗಗಳಂತಹ ಭಾವನಾತ್ಮಕ ಶಕ್ತಿ ಹಾಗೂ ಮಾನವನ ದೈಹಿಕ ಬಯಕೆಗಳು—ಈ ಮೂರೂ ಸಮರಸದಿಂದ ಕೂಡಿದ್ದರೆ ಮಾತ್ರ ಮಾನವ ಸುಖಿಯಾಗಿರುತ್ತಾನೆ, ಎನ್ನುತ್ತಾನೆ ಪ್ಲೇಟೊ. ಇದನ್ನು ಸಮಾಜದ ಮಟ್ಟಕ್ಕೂ ವಿಸ್ತರಿಸಿ ಪ್ರತಿಯೊಂದು ಸಮಾಜದಲ್ಲೂ ಕಂಡುಬರುವ ಆಡಳಿತವರ್ಗದವರು, ರಕ್ಷಕ ವರ್ಗದವರು ಹಾಗೂ ಜನಸಾಮಾನ್ಯರಾದ ಕಾರ್ಮಿಕರು, ರೈತರು, ಕುಶಲಕರ್ಮಿಗಳು—ಈ ಮೂರೂ ಗುಂಪುಗಳು ಸಾಮರಸ್ಯದಿಂದ ಕಾರ್ಯ ನಿರ್ವಹಿಸಿದರೆ ಸಮಾಜ ಉತ್ತಮವಾಗಿರುತ್ತದೆ ಎನ್ನುತ್ತಾನೆ. ಇದನ್ನು ಸಮರ್ಥಿಸಿದ ಅರಿಸ್ಟಾಟಲ್ ವಿಚಾರಪೂರ್ಣವಾದ ಹಿತಮಿತಗಳುಳ್ಳ ನಡತೆಗೆ ಪ್ರಾಶಸ್ತ್ಯ ನೀಡಿದ. ಸಾಮಾಜಿಕ ಸುಖ ಹಾಗೂ ವೈಯಕ್ತಿಕ ಸುಖಗಳೆರಡಕ್ಕೂ ಸಮಾನವಾದ ಸ್ಥಾನ ನೀಡಿ ಸಹಬಾಳ್ವೆ, ತ್ಯಾಗ ಹಾಗೂ ಸಮ ವಿತರಣೆಗೆ ಒತ್ತು ನೀಡಿದ.

ಈ ಎಲ್ಲ ಸಿದ್ಧಾಂತಗಳೂ ನೈತಿಕತೆಗೆ ಕಾರಣಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತವೆ. ಧರ್ಮಗಳೂ ಕೂಡ

**ಸಾಮಾನ್ಯವಾಗಿ ಯಾವ ನಡವಳಿಕೆಯು ನಿಸ್ವಾರ್ಥ ಬುದ್ಧಿಯ ಕೃತಿಯೋ ಅದು ನೀತಿಯೆನಿಸಬಹುದು. ಯಾವುದರಲ್ಲಿ ವಿಶಾಲವಾದ ನೋಟವಿದೆಯೋ, ಬಹುಜನರ ಹಿತವು ಯಾವುದರಿಂದ ಆಗುತ್ತದೆಯೋ ಅದು ನೀತಿಯೆಂಬುದಾಗಿ ಆ ಕಾಲಕ್ಕೆ ತಿಳಿಯಬಹುದು.** — ಡಾ.ಶಿವರಾಮ ಕಾರಂತ

ನೀತಿ, ನಿಯಮಗಳನ್ನು ವಿಧಿಸುತ್ತವೆ. ಮಾಡಬೇಕಾದ ಕ್ರಿಯೆಗಳು (ಕರ್ಮ), ಮಾಡಬಾರದ ಕ್ರಿಯೆಗಳು (ವಿಕರ್ಮ ಅಥವಾ ನಿಷಿದ್ಧ ಕರ್ಮ) ಹಾಗೂ ಕ್ರಿಯಾರಹಿತನಾಗಿ ಸುಮ್ಮನಿರುವುದು (ಅಕರ್ಮ)—ಇವು ಭಗವದ್ಗೀತೆಯಲ್ಲಿ ಬರುವ ವಿವಿಧ ರೀತಿಯ ಕರ್ಮಗಳು. ಎಲ್ಲ ಧರ್ಮಗಳೂ ತಮ್ಮದೇ ಆದಂತಹ ಪಾಪಪುಣ್ಯಗಳ ಚೌಕಟ್ಟುಗಳನ್ನು ಹೊಂದಿವೆ. ಅವನ್ನು ಮೀರಿದರೆ ನರಕದ ಕಷ್ಟಗಳನ್ನು ಅನುಭವಿಸಬೇಕು ಎಂಬ ಪಾಪಭೀತಿಯನ್ನೂ ಧಾರ್ಮಿಕ ಗ್ರಂಥಗಳು ವಿವರಿಸುತ್ತವೆ. ಧಾರ್ಮಿಕ ನಂಬಿಕೆಗಳನ್ನು ಅನುಸರಿಸಿ ಮಾನವ ತನ್ನ ಸ್ವಾರ್ಥವನ್ನು ತೊರೆದು ಉತ್ತಮನಾಗಬಲ್ಲ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಬಸವಣ್ಣನವರ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ", ಬುದ್ಧನ ಅಷ್ಟಾಂಗ ಮಾರ್ಗ, ಕ್ರೈಸ್ತಧರ್ಮದ ಹತ್ತು ದೈವ ಕಟ್ಟಳೆಗಳು—ಇವುಗಳೆಲ್ಲ ಧಾರ್ಮಿಕ ಶ್ರದ್ಧೆಯನ್ನು ಅವಲಂಬಿಸಿ ಮಾನವನು ಉತ್ತಮನಾಗುವುದಕ್ಕೆ ಹಾಕಿಕೊಟ್ಟ ಸೋಪಾನಗಳು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ವಿನಾಯಿತಿ ಇಲ್ಲದೆ ಎಲ್ಲಾ ಧಾರ್ಮಿಕ ಸಿದ್ಧಾಂತಗಳಲ್ಲಿಯೂ ಇರುವ ಒಂದು ಕೊರತೆಯೆ, ಮನುಷ್ಯ ಹೇಗೆ ತಪ್ಪನ್ನು ಮಾಡದೆ ಇರುವುದು ಎಂಬುದನ್ನು ಬೋಧಿಸದೆ ಇರುವುದು. ಎಲ್ಲಾ ಧಾರ್ಮಿಕ ಸಿದ್ಧಾಂತಗಳೂ 'ಕದಿಯಬೇಡಿ' ಎಂದು ಹೇಳುವುವು. ಅದೇನೋ ಒಳ್ಳೆಯದೆ. ಆದರೆ ಮನುಷ್ಯ ಏತಕ್ಕೆ ಕದಿಯುವನು? ಎಲ್ಲಾ ಕಳ್ಳತನ, ದರೋಡೆ ಮತ್ತು ದುಷ್ಕೃತ್ಯಗಳು ಯಾಂತ್ರಿಕವಾಗಿವೆ. ನಮ್ಮ ಇಚ್ಛೆ ಇಲ್ಲದೆ ನಡೆಯುತ್ತಿವೆ" (ಬೋಧನೆಯ ಸಾರ, ಪು.೫೧). ಇಚ್ಛಾಶಕ್ತಿಯನ್ನು ಪ್ರಯೋಗಿಸಿ ದೃಢತೆಯಿಂದ ವೈಯಕ್ತಿಕ ಹಾಗೂ ಸಮಾಜದ ಹಿತವನ್ನು ಸಾಧಿಸಿದಾಗ ಮನುಷ್ಯನು ಉತ್ತಮನಾಗಿದ್ದಾನೆ, ನೈತಿಕವಾಗಿದ್ದಾನೆ ಅಥವಾ ಸುಸಂಸ್ಕೃತನಾಗಿದ್ದಾನೆ ಎಂದು ಹೇಳಬಹುದು. ಧಾರ್ಮಿಕ ನಂಬಿಕೆಯೊಂದಿಗೆ ಎಲ್ಲ ಜೀವಿಗಳಲ್ಲೂ, ವಸ್ತುಗಳಲ್ಲೂ ವ್ಯಾಪಿಸಿರುವ ಭಗವಂತನನ್ನು ಆರಾಧಿಸುವ ಭಾವನೆಯೊಂದಿಗೆ, ಮಾಡುವ ಕ್ರಿಯೆಗಳನ್ನು ಪೂಜೆಯ ಭಾವದಿಂದ ಮಾಡಿದಾಗ ನೈತಿಕತೆಯನ್ನು ಸಾಧಿಸಿದಂತಾಗುತ್ತದೆ. ಗೀತೆಯಲ್ಲಿ ಹೇಳಿರುವ **ಅದ್ವೇಷ್ಟಾ ಸರ್ವಭೂತಾನಾಂ, ಮೈತ್ರಃ ಕರುಣ ಏವ ಚ**—ಯಾವನು ಸರ್ವಪ್ರಾಣಿಗಳಲ್ಲೂ ದ್ವೇಷರಹಿತನಾಗಿ, ಮಿತ್ರಭಾವದಿಂದ ಕೂಡಿರುವನೋ, ಕರುಣೆಯುಳ್ಳವನೋ (ಗೀತೆ, ೧೨.೧೩) ಅಥವಾ ಹದಿನಾರನೆ ಅಧ್ಯಾಯದ ದೈವೀಗುಣಗಳು ಹಾಗೂ ಏಸುಕ್ರಿಸ್ತನ "ನೆರೆಹೊರೆಯವರನ್ನು ನಿನ್ನಂತೆಯೇ ಕಾಣು" ಎಂಬ ಸಂದೇಶಗಳು ಅರ್ಥಪೂರ್ಣವಾಗಬೇಕಾದರೆ ಮಾನವನು ಮೊದಲು ತಾನು ಬದಲಾಗಬೇಕು. ಇತರರ ದೋಷಗಳನ್ನಾಗಲಿ, ಸಮಾಜದಲ್ಲಿರುವ ದೋಷ ಅನೀತಿಗಳನ್ನಾಗಲಿ ತಿದ್ದಲು ನಾವ್ಯಾರು? ನಮ್ಮಲ್ಲಿರುವ ಅಂಕುಡೊಂಕುಗಳನ್ನು ತಿದ್ದಿಕೊಳ್ಳುವುದರ ಮೂಲಕ ಉದಾರ ದೃಷ್ಟಿಯನ್ನು ಬೆಳೆಸಿಕೊಳ್ಳೋಣ. ಸ್ವಾಮಿ ವಿವೇಕಾನಂದರ ಈ ನುಡಿಗಳು ನಮಗೆ ಆದರ್ಶವಾಗಿದ್ದರೆ ಸಾಕು: "ಒಳ್ಳೆಯವರಾಗಿರುವುದು ಅಷ್ಟು ಸುಲಭವಲ್ಲ. ನೀವು ಒಳ್ಳೆಯವರೆಂದು ಅಹಂಕಾರ ಪಡಬೇಕೆ? ಎಂದಿಗೂ ಇಲ್ಲ. ನಮ್ಮ ಸಮಾಜದಲ್ಲಿರುವ ಜಾರೆ, ಸೆರೆಮನೆಯಲ್ಲಿ ಕೊಳೆಯುವ ಚೋರ, ನೀವು ಒಳ್ಳೆಯವರಾಗಲಿ ಎಂದು ತ್ಯಾಗ ಮಾಡಿದ ಕ್ರಿಸ್ತನಂತಹ ಮಹಾಪುರುಷರು. ನೀವು ಅವರ ಸ್ಥಿತಿಯಲ್ಲಿದ್ದರೆ ಯಾರಿಗೆ ಗೊತ್ತು, ನೀವು ಹೇಗೆ ಇರುತ್ತಿದ್ದಿರೋ?" (ಬೋಧನೆಯ ಸಾರ, ಪು.೫೧). ✪

"ಎಲ್ಲ ನೀತಿಯ ವಿವರಣೆ ಎಲ್ಲಿರುವುದು? ... ದಯೆ ತೋರುವುದೇ ಮಾನವಕೋಟಿಯ ಮಾರ್ಗದರ್ಶಕ ತತ್ತ್ವ. ಅದರೆ ಇದು 'ನಾನೇ ವಿಶ್ವವು, ಈ ವಿಶ್ವವು ಅಖಂಡ' ಎಂಬ ಸನಾತನ ತತ್ತ್ವವನ್ನು ವ್ಯಕ್ತಪಡಿಸುವ ಭಾವನೆಯೇ ಆಗಿದೆ. ನಾನು ಇತರರಿಗಾಗಿ ಏತಕ್ಕೆ ಸಹಾಯ ಮಾಡಬೇಕು?... ಆತ್ಮಾಭಿಮಾನದ ಪೂರ್ಣ ನಿರಾಕರಣೆಯೇ ಎಲ್ಲ ಬಗೆಯ ನೀತಿಯ ಕೇಂದ್ರ. ಆತ್ಮಾಭಿಮಾನದ ನಿರಾಕರಣೆಯ ಆದರ್ಶ ಎಂದರೇನು? ಈ ತೋರಿಕೆಯ ವ್ಯಕ್ತಿತ್ವದ ತ್ಯಾಗ, ಎಲ್ಲಾ ಬಗೆಯ ಸ್ವಾರ್ಥತ್ಯಾಗ ನಿಜವಾದ ಆತ್ಮಾಭಿಮಾನದ ನಿರಾಕರಣೆ. ಈಗಿನ ಅಹಂಕಾರ ಮಮಕಾರಗಳು ಹಿಂದಿನ ಮೂಢನಂಬಿಕೆಯ ಪರಿಣಾಮಗಳು. ಈ ತೋರಿಕೆಯ ವ್ಯಕ್ತಿತ್ವ ತೊಲಗಿದಷ್ಟೂ ನಿಜವಾದ ಆತ್ಮ ವ್ಯಕ್ತವಾಗುವುದು. ಇದೇ ನಿಜವಾದ ಆತ್ಮಾಭಿಮಾನದ ನಿರಾಕರಣೆ, ಎಲ್ಲ ನೀತಿ ಬೋಧನೆಯ ಮೂಲ, ಕೇಂದ್ರ, ಸಾರ.... ಅನಂತವೇ ಮಾನವನ ನೈಜ ಸ್ವರೂಪ." —ಸ್ವಾಮಿ ವಿವೇಕಾನಂದ